doc-524
T.P-2

Reg No B G 155 9—8—72

55th Year of Publication 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು. ಅರಮನೆ ಸರ್ವೇದಾರ್ ಎಂ. ವಿ. ಪುಟ್ಟರಾಜ್ ಸಂಪಾದಕರು ವಿದ್ವಾನ್ ಪಂಡಿತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತುರ್ತು ಪರಿಸ್ಥಿತಿ ಹೋಗಬೇಕೆಂದು ಒತ್ತಾಯ

ನಿವೇಶನ ಕೊಡಿಕೆ

ಚಿತ್ರದುರ್ಗ— ಗ್ರಾಮಾಂತರ ಭಾಗಗಳಲ್ಲಿ 5 ಲಕ್ಷ ನಿವೇಶಗಳನ್ನು ಹಂಚಿ, ಕಾಂಗ್ರೆಸ್ ಪಾರ್ಟಿಯು ಶಾಂತಿರೀತಿ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದೆಂದು ಮುಖ್ಯ ಮಂತ್ರಿ ಶ್ರೀವರಾಜ ಅರಸ್ ರವರು ಹೇಳಿದರು

○

ಅಧಿಕೃತ ಭಾಷೆಯಾಗಿ ಕನ್ನಡ

ಚಾಮರಾಜನಗರ — ಇಲ್ಲಿ ಪುರಸಭೆಯು ಆಗಸ್ಟ್ 15 ರಿಂದ ಕನ್ನಡವನ್ನು ಅಧಿಕೃತ ಭಾಷೆಯಾಗಿ ಅನುಸರಿಸಲು ನಿರ್ಣಯಿಸಿದೆ.

★

2000 ಜನಸಂಖ್ಯೆಗೆ ಒಬ್ಬ ಡಾಕ್ಟರು

ಬೆಂಗಳೂರು— 6 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ 2000 ಜನಸಂಖ್ಯೆಗೆ ಒಬ್ಬ ಡಾಕ್ಟರು ಇರುವಂತೆ ರಾಜ್ಯ ಸರಕಾರ ಯೋಜಿಸಿದೆಯೆಂದು ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಮೆಡಿಕಲ್ ಏಡ್ ಸೊಸೈಟಿ ಏರ್ಪಡಿಸಿದ್ದ ಸಮಾರಂಭದಲ್ಲಿ ಹೇಳಿದರು.

ಗೋಮಾಂಸ ಹಂದಿಮಾಂಸ ಭೋಜನ

ಹೈದರಾಬಾದು— ವಿಜಯವಾಡದಲ್ಲಿ ತಾ || 15 ರಂದು ಸರ್ವೋದಯ ನಾಯಕ ಶ್ರೀ ಗೋರ ಏರ್ಪಡಿಸಿರುವ 'ಗೋಮಾಂಸ ಹಂದಿಮಾಂಸ" ಭೋಜನಕ್ಕೆ ಆಚಾರ್ಯ ವಿನೋಬಾ ಭಾವೆಯವರು ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ — ಆಂಧ್ರಪ್ರದೇಶದ ಸರ್ವೋದಯ ಕಾರ್ಯದರ್ಶಿಯವರಿಗೆ ತಂತಿ ಮುಖಾಂತರ ತಿಳಿಸಲಾಗಿದ್ದು, ಇದು ಕೇವಲ ಗೋರಯವರ ಕಾರ್ಯವಾಗಿದ್ದು, ಸರ್ವೋದಯಕ್ಕೆ ಸಂಬಂಧಪಟ್ಟದ್ದಲ್ಲವೆಂದೂ ತಿಳಿಸಲಾಗಿದೆ — ಇಲ್ಲಿ ತಂಗಿರುವ ಪೂರಿ ಜಗದ್ಗುರುಗಳವರೂ ಈ ಏರ್ಪಾಟನ್ನು ತ್ಯಜಿಸಬೇಕೆಂದು ಗೋರಯವರನ್ನು ವಿನಂತಿ ಮಾಡಿದ್ದರಲ್ಲದೆ. ಇವನ್ನು ನಿಲ್ಲಿಸಲು ಶ್ರೀ ಜಯಪ್ರಕಾಶ ನಾರಾಯಣರಲ್ಲಿಯೂ ಮನವಿ ಮಾಡಿದ್ದಾರೆ.

ಹಿಂದೂಸ್ತಾನಿ ಸಂಗೀತದ ಮೇಲೆ ವಿಷ್ಣು ದಿಗಂಬರ್ ಪಲುಸ್ಕರ್ ಸೆಮಿನಾರ್ ಈ ತಿಂಗಳು 12 ರಂದು ಉದ್ಘಾಟಿಸಲ್ಪಡುವುದು 14 ನೇ ತಾ || ಮುಕ್ತಾಯವಾಗುವುದು.

ಸಮಾಜ ಸಮಾನತೆ

ಬೊಂಬಾಯಿ— ಭೂಮಿ ಹರಿವಿತಿಯಿಂದ ಮಹಾನಗರಗಳಲ್ಲಿಯ ಆಸ್ತಿ ಪರಿಮಿತಿಯಿಂದ ಒಂದು ರೀತಿಯ ಸಮಾಜವಾದದ ಬೀಜ ಬಿತ್ತಿದಂತಾಗಿದೆಯೆಂದು ಪ್ರಧಾನಿ ಇಂದಿರಾಗಾಂಧಿಯವರು ಹೇಳಿದರು.

★

ಜನಸಂಘದ ಸತ್ಯಾಗ್ರಹ

ಜಲಂಧರ್— ಲೋಕಸಭಾ ಸದಸ್ಯ ಜನಸಂಘದ ಪ್ರೊ. ಸಮರ್ ಚಂದ್ರ ಬಚವಾಲಿಯವರು 100 ಮಂದಿ ಕಾಯ್ದೆ ಕರ್ನಾಡನೆ ಚಾಬಿಹಾಕಿ ಗಡಿಯಿಂದ ಶಕಾರಪುರ್ ಭಾಗಕ್ಕೆ ಏಗಿ

ಗಿಳಿಯಿಂದ ಅತೀವ ತೊಂದರೆ

ಸ್ವಾರ್ಸಬಾಸ್ಟಿಯಂ (ಸ್ವಿಟ್ಜ್)— ಒಂದು ಗಿಳಿಯು ತನ್ನ ತೀವ್ರ ಶಿಳ್ಳೆ ಹೊಡೆತದಿಂದ ರೈಲುಗಳು ನಿಗ್ದಿಷ್ಟಿತ ಕಾಲಕ್ಕೆ ಮುಂಚೆಯೇ ಹೊರಡುವಂತೆ ಮಾಡುತ್ತಿದೆ ಎಂದೂ ಕ್ರೋಧಪೂರಿತವಾಗಿ ಸ್ವಿಟ್ಜ್ ರೈಲ್ವೇ ಅಧಿಕಾರಿಗಳು ಆ ಗಿಳಿಯ ಮಾಲಿಕನಾದ ಒಬ್ಬ ಹೋಟಲಿನವನಿಗೆ ಬರೆದಿರುವರು.

ಡಿಲಿವರಿ ಆರ್ಡರುಗಳಿಗೆ ಕೋಡ್ ನಂಬರ್

ನವದೆಹಲಿ— ಎಲ್ಲಾ ಡಿಲಿವರಿ ಪೋಸ್ಟ್ ಆರ್ಡರುಗಳಿಗೂ ಆಗಸ್ಟ್ 15 ರಿಂದ ಅಂಚೆ ತಂತಿ ಇಲಾಖೆಯು ಒಂಡೊಂದು ಕೋಡ್ ನಂಬರನ್ನು ಕೊಡಲಿದೆ — ಮೈಸೂರು ರಾಜ್ಯದ್ದು ನಂಬರ್ ೮.

ನೀರಿನ ಅಭಾವ

ತಿರುಪತಿ — ಇಲ್ಲಿ ನೀರಿನ ಅಭಾವ ತೀವ್ರವಾಗಿದ್ದು ಹೀಗೇ ಒಂದುವಾರ ಮುಂದುವರೆದರೆ ನೀರೇ ಇಲ್ಲದಂತಾಗುವುದೆಂದು ಹೇಳಲಾಗಿದೆ

ತುರ್ತು ಪರಿಸ್ಥಿತಿ ಹೋಗಲಿ

ನವದೆಹಲಿ— ಡಿಸೆಂಬರು ಯುದ್ಧ ಸಂಬಂಧದಲ್ಲಿ ಸಾರಲಾದ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಬೇಕೆಂದು ಲೋಕ ಸಭೆಯಲ್ಲಿ ಹಲವು ಪ್ರದಸ್ಯರು ಕೇಳಿಕೆ ಹಾಕಿದರು — ಯುದ್ಧ ಮುಗಿದನಂತರ ಅದನ್ನು ಮುಂದುವರಿಸುವುದು ಅಪ್ರಮಾಣಿಕತೆಯೆಂದು ಹೇಳಿದರು.

★

ಬೆಲೆ ಏರಿಕೆ ಪ್ರತಿಬಂಧ

ನವದೆಹಲಿ— ಬೆಲೆ ಏರಿಕೆಯನ್ನು ಅಡ್ಡಕಟ್ಟಲು ಅವಶ್ಯ ಪದಾರ್ಥಗಳನ್ನು ಪರಿಣಾಮಕಾರಿಯಾಗಿ ಹಂಚಿಕೆ ವ್ಯವಸ್ಥೆ ಮಾಡಲು ಸರಕಾರ ನಿರ್ಧರಿಸಿದೆಯೆಂದು ರಾಜ್ಯ ಸಭೆಯಲ್ಲಿ ಆರ್ಥ ಮಂತ್ರಿ ಶ್ರೀ ಚವಣರು ತಿಳಿಸಿದರು.

ರಾಜ್ಯಕ್ಕೆ ನೆರವು

ನವದೆಹಲಿ— ಫೈನಾನ್ಸ್ ಕಮಿಷನ್ ಒಪ್ಪಿಸಿರುವ ರೂ 44 ಲಕ್ಷ ದಲ್ಲಿ ಪ್ರವಾಹ ಪೀಡಿತ ತುಮಕೂರು ಜಿಲ್ಲೆಯಲ್ಲಿ ಪರಿಹಾರಕ್ಕೆ ಉಪಯೋಗಿಸಿಕೊಂಡು ಡ್ಯಾಮೆಜ್ ಆಗಿರುವ ಸಂಪರ್ಕ ಮತ್ತು ನೀರಾವರಿ ಕೆಲಸಗಳಿಗೆ ಕೇಂದ್ರಕ್ಕೆ ಪ್ರತ್ಯೇಕ ಮನವಿ ಕಳುಹಿಸಲು ಮೈಸೂರು ರಾಜ್ಯಕ್ಕೆ ತಿಳಿಸಲಾಗಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ಆಹಾರ ಪರಿಸ್ಥಿತಿ

ನವದೆಹಲಿ — 10 ವರ್ಷಗಳೊಳಗೆ ದೇಶದ ಆಹಾರ ಪರಿಸ್ಥಿತಿಯು ಶೇಕಡಾ 50 ರಷ್ಟು ಪರಿಹಾರವಾಗುವುದೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು — ಪ್ರವಾಹ ಪೀಡಿತ ಹತೋಟಿಯ ಹೊಸ ಯೋಜನೆ ಕೈಗೊಳ್ಳಲಾಗುವುದೆಂದೂ ತಿಳಿಸಲಾಯಿತು.

★

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ
ಹೊಟೇಲ್ ಬಿಲಾಲ್‌ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಿದರು
ಮಹಾಜನರ ಪ್ರೋತ್ಸಾಹ ಕೋರಿದೆ
ಎಂ. ಅಬ್ದುಲ್ ರಜಾಕ್, ಮಾಲೀಕರು

ಸ್ಪೀಕರರನ್ನು ಪೋಲೀಸರು ಎಂದುದಕ್ಕೆ

ನವದೆಹಲಿ.... ಲೋಕಸಭಾ ಸ್ಪೀಕರು ಶ್ರೀ ಡಿಲಾನರನ್ನು ವಿರೋಧ ಪಕ್ಷದ ಸದಸ್ಯರೊಬ್ಬರು ಪೋಲೀಸಿನವರು ಎಂದಾಗ ಅವರ ರಕ್ಷಣೆಗೆ ಸರಕಾರಿ ಸದಸ್ಯರಾರೂ ಬರದಿದ್ದುದಕ್ಕೆ ಅವರು ವಿಷಾದಿಸಿ, ರಾಜೀನಾಮೆಕೊಡುವ ಯೋಚನೆ ಹೊಂದಿರುವರೆಂದು ಹೇಳಲಾಗಿದೆ.

ಕನ್ನಡವನ್ನು ಆಡಳಿತ ಭಾಷೆಯಾಗಿ ಎಲ್ಲ ಹಂತಗಳಲ್ಲಿಯೂ ಜಾರಿಗೆ ತರಬೇಕು

ಮೈಸೂರು ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ, ರಾಜ್ಯಕ್ಕೆ ಕರ್ನಾಟಕ ವೆಂದು ಹೆಸರಿಡಲು ತೀರ್ಮಾನಿಸಿದ ರಾಜ್ಯ ಸರಕಾರವನ್ನು ಅಭಿನಂದಿಸಿ, 1973 ರ ಗಣರಾಜ್ಯೋತ್ಸವ ದಿನದಿಂದಲೇ ಎಲ್ಲ ಹಂತಗಳಲ್ಲಿಯೂ ಜಾರಿಗೆ ತರಬೇಕೆಂದು ರಾಜ್ಯ ಸರಕಾರವನ್ನು ಸರ್ವಾನುಮತದಿಂದ ಒತ್ತಾಯ ಮಾಡಲಾಯಿತು.

ಸರಕಾರಿ ಕೆಲಸ ವೇಳೆ

ಬೆಂಗಳೂರು— ರಾಜ್ಯದಾದ್ಯಂತ ರಾಜ್ಯ ಸರಕಾರೀ ಕಚೇರಿಗಳ ಕೆಲಸದ ಅವಧಿಯನ್ನು ಪರಿಷ್ಕರಿಸಲಾಗಿದೆ ; ಪರಿಷ್ಕೃತ ಕೆಲಸದ ಅವಧಿ ಬೆಳಿಗ್ಗೆ 10-30 ಗಂಟೆಯಿಂದ ಸಾಯಂಕಾಲ 5-30 ಗಂಟೆಯ ವರೆಗೆ ; ಮಧ್ಯಾಹ್ನ 1-30 ಗಂಟೆಯಿಂದ 2-15 ಗಂಟೆಯ ವರೆಗೆ 45 ನಿಮಿಷಗಳ ಅವಧಿಯಲ್ಲಿ ಊಟದ ಬಿಡುವು. ಪ್ರತಿ ತಿಂಗಳೂ ಎರಡನೇ ಶನಿವಾರ ರಜ. ಆಗಸ್ಟ್ 7 ರಿಂದ ಈ ಆಚರಣೆ.

Quality Printing Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

— Humanitarian Propoganda Monthly ....

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore

ವುಡ್‌ಲ್ಯಾಂಡ್ 4-8-72ರಿಂದ ಆಮೋಘ **14ನೇವಾರ**

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರೆದು ನೋಡು

ಅಪೆರಾ 11 8 72ರಿಂದ

— ಆತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪಾತ್ರ— ರಾಜ್‌ಕುಮಾರ್, ಹೇಮಾವಯಲಿನ್ನಿ, ರಾಖಿ, ವಿನೋದ್ ಮೆಹ್ರಾ

ದಿನ 3 ಪ್ರದರ್ಶನಗಳು

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈಧೇಶ ಹೊತ್ತ ಚಿತ್ರ ಸಂದೇಶ್ ಠವರ ಜೊಳ್ಳಲು ಚಿತ್ರ

ಅನೆ-ಹುಡುಗ



Protect the Cow

Contribute Liberally
to the National Defence Fund